ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 5, November-December 2023, Pp. 23-30
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಪಿ.ಲಂಕೇಶರ ಕಥೆಗಳಲ್ಲಿ ಮಹಿಳಾ ಪ್ರತಿನಿಧೀಕರಣ

**ವಿದ್ಯಾ ಟಿ.ಎನ್**
ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

***Abstract:***
*ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ "ಸಣ್ಣ ಕಥೆ" ಎಂಬುದು ಹೊರಗಿನಿಂದ ಆಮದಾಗಿ ಬಂದ ಪ್ರಕಾರ. ಸಾಹಿತ್ಯ ಪ್ರಕಾರಗಳಲ್ಲಿ ಸಣ್ಣ ಕಥೆಗೆ ಮಹತ್ವದ ಸ್ಥಾನವಿದೆ. 'ಸಣ್ಣ ಕಥೆ' ಎಂಬುದು ಸ್ವರೂಪ ಹಾಗೂ ವಿನ್ಯಾಸದಲ್ಲಿ ಆಧುನಿಕವಾದುದು. ಅಲ್ಲಿ ಮನುಷ್ಯ ಜೀವನದ ಆಧಾರದಿಂದ ಕಲ್ಪಿತವಾದ ನಿರೂಪಣೆ ಇದ್ದು, ಓದುಗ ಹಾಗೂ ಚಿತ್ರತವಾಗಿರುವ ವಸ್ತುವಿನ ನಡುವೆ ಸಂಬಂಧ ಏರ್ಪಡುತ್ತಿರುತ್ತದೆ. ಅದು "ಒಂದು ನಿರ್ದಿಷ್ಟ ಕಾಲ ಮತ್ತು ಸ್ಥಳಗಳಲ್ಲಿ ಪಾತ್ರಗಳ ಕ್ರಿಯೆ ಮತ್ತು ಪ್ರತಿಕ್ರಿಯೆಗಳ ಮೂಲಕ ಭಾವನೆಗಳನ್ನು ತೆರೆದಿಡುವಂಥದ್ದು" ಕನ್ನಡ ಸಣ್ಣ ಕಥೆ ಇದೆ ಹಿನ್ನೆಲೆಯುಳ್ಳದ್ದಾಗಿದೆ. ಅದು ದೇಶೀ ಸತ್ವವನ್ನು ಒಳಗೊಂಡಿದ್ದರೂ, ಸ್ವರೂಪ ಹಾಗೂ ರಚನೆ ವಿಧಾನದಲ್ಲಿ ಎರವಲು ಲಕ್ಷಣಗಳನ್ನು ಮೈಗೂಡಿಸಿಕೊಂಡಿದೆ. ಪ್ರಸ್ತುತ ಲೇಖನದಲ್ಲಿ ಪಿ.ಲಂಕೇಶರ ಕಥೆಗಳಲ್ಲಿ ಕಂಡು ಬರುವ ಮಹಿಳಾ ಪ್ರತಿನಿಧೀಕರಣದ ಬಗ್ಗೆ ವಿಶ್ಲೇಷಿಸಲಾಗಿದೆ.*

***Keywords:*** *ಪಿ.ಲಂಕೇಶ್, ಆಧುನಿಕ ಕನ್ನಡ ಸಾಹಿತ್ಯ, ಸಣ್ಣಕಥೆ, ಮಹಿಳಾ ಪ್ರತಿನಿಧೀಕರಣ.*

## ಪೀಠಿಕೆ

ಆಧುನಿಕ ಕನ್ನಡ ಸಣ್ಣಕಥೆ ಪ್ರಕಾರಕ್ಕೆ ನೂರು ವರ್ಷಗಳು ಮೀರಿವೆ. ಇದು ಅರ್ಧ ತಾಸಿನಿಂದ ಒಂದು ಅಥವಾ ಎರಡು ತಾಸಿನಲ್ಲಿ ಓದಿ ಮುಗಿಯಬಹುದಾದ ಗದ್ಯಾತ್ಮಕ ಕಥಾನಕ ಎಂದು ಸಣ್ಣ ಕಥೆಯ ಜನಕ ಅಮೇರಿಕಾದ ಎಡ್ಗರ್ ಅಲೆನ್ ಪೋ ಹೇಳಿದ್ದಾನೆ. ಕುಳಿತ ಕಡೆಯೇ ಓದಿ ಮುಗಿಸಬಹುದಾದ ಏಕೈಕ ಕಲಾಪರಿಣಾಮವುಳ್ಳ ಲಲಿತ ಸಾಹಿತ್ಯವೇ ಸಣ್ಣಕಥೆ. ಸಣ್ಣ ಕಥೆ ಓದುಗರಿಗೆ ಬೇಸರ ಬಂದಿತೆಂದು ಅರಿವಾಗುವ ಮೊದಲೇ ಓದಿ ಮುಗಿಸುವಷ್ಟು ಚಿಕ್ಕದಾಗಿರುವುದರಿಂದ ತನ್ನ ಜನಪ್ರಿಯತೆಯನ್ನು ಅದು ಉಳಿಸಿಕೊಂಡಿದೆ. "ಜನರ ಜೀವನದಲ್ಲಿ ಆಯ್ಕೆಯ ಮನೋವೃತ್ತಿ ಬೆಳೆದಾಗ ಸಣ್ಣಕಥೆ ಜನಿಸಿತು. ಇಡೀ ಜೀವನದ ಕಥೆ ಬೇಡ, ಮುಖ್ಯ ವಿಷಯ ಏನಾಯಿತು ಹೇಳು; ಎಂದೂ ಜನತೆ ಕಥೆಗಾರನಿಗೆ ಪ್ರಶ್ನಿಸಿದ ದಿನವೇ 'ಸಣ್ಣಕಥೆ' ಜನಿಸಿರಬಹುದು" ಹೇಳಲೇಬೇಕಾದುದಕ್ಕೆ ಲೋಪಬಾರದಂತೆ ಆದಷ್ಟು ಸಂಕ್ಷೇಪ ಸಾಧನಗಳಿಂದ ಏಕೈಕ ಕಲಾಪರಿಣಾಮವನ್ನು ಸಾಧಿಸುವುದೇ ಸಣ್ಣಕಥೆಯ ಹೆಗ್ಗುರಿಯಾಗಿದೆ.

19ನೇಯ ಶತಮಾನದ ಉತ್ತರಾರ್ಧದಲ್ಲಿ ಇಂಗ್ಲೀಷ್ ವಿದ್ಯಾಭ್ಯಾಸ ಮತ್ತು ಮುದ್ರಣ ಸೌಲಭ್ಯದಿಂದಾಗಿ ಕಥೆಗಳ/ಸಣ್ಣಕಥೆಗಳ ಅನುವಾದ ಮತ್ತು ಪ್ರಕಟಣೆ ಆರಂಭವಾಯಿತು. ಆ ಸಂದರ್ಭದಲ್ಲಿ ಕಥೆಗಳು ಹೆಚ್ಚು ಪ್ರಕಟವಾಗಲು ಅಂದಿನ ಪತ್ರಿಕೆಗಳು ಅವಕಾಶವನ್ನು ಕಲ್ಪಿಸಿದವು. ಸಣ್ಣ ಕಥೆಗಳಿಗಿದ್ದ ಬೇಡಿಕೆಯಿಂದ ನಾಟಕಗಳನ್ನು ಕಥಾ

***Please cite this article as:*** ವಿದ್ಯಾ ಟಿ.ಎನ್. (2023). ಪಿ. ಲಂಕೇಶರ ಕಥೆಗಳಲ್ಲಿ ಮಹಿಳಾ ಪ್ರತಿನಿಧೀಕರಣ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್,* 2(5), 23–30.

ರೂಪದಲ್ಲಿ ಅನುವಾದಿಸಿದ್ದುಂಟು. 1851ರಲ್ಲಿ ಮಾನವಿ ವೀರಪ್ಪ ಅವರ 'ಕಥಾಸಾಗರ' 1889ರಲ್ಲಿ ಮಾಲೂರು ಎಸ್.ಕೃಷ್ಣಯ್ಯ ಅವರ 'ಮರ್ಯಾದೆ ರಾಮಣ್ಣನ ಕಥೆಗಳು' ಪ್ರಕಟಗೊಂಡವು.

ಕನ್ನಡದಲ್ಲಿ 'ಸಣ್ಣಕಥೆ' ಎನ್ನಬಹುದಾದ ಕಥೆಗಳನ್ನು ಮೊದಲು ಬರೆದವರು ಪಂಜೆ ಮಂಗೇಶರಾಯರು ಕ್ರಿ.ಶ. 1900ರಲ್ಲಿ 'ಸುವಾಸಿನಿ' ಪತ್ರಿಕೆಯಲ್ಲಿ ಪ್ರಕಟಿಸಿದ 'ಭಾರತ ಶ್ರವಣ', 'ಕಮಲಪುರದ ಹೊಟ್ಟಿನಲ್ಲಿ', 'ನನ್ನ ಚಿಕ್ಕತಾಯಿ', 'ನನ್ನ ಚಿಕ್ಕ ತಂದೆಯ ಉಯಿಲು' ಕಥೆಗಳ ಮೂಲಕ ಆಧುನಿಕ ಸಣ್ಣ ಕಥೆಯ ಚರಿತ್ರೆ ಪ್ರಾರಂಭವಾಯಿತೆನ್ನಬಹುದು. ಮಾಸ್ತಿಯವರೇ ಹೇಳುವಂತೆ "ಕನ್ನಡದಲ್ಲಿ ಸಣ್ಣಕಥೆಗಳನ್ನು ಮೊದಲು ಬರೆದವರು ಅವರೇ ಎಂದು ಕಾಣುತ್ತದೆ. ಹೀಗಾಗಿ ಪಂಜೆಯವರ ಕಥೆಗಳಿಗೆ ಐತಿಹಾಸಿಕ ಮಹತ್ವವಿದೆ. ನಂತರ ಮಾಸ್ತಿಯವರು 1911ರಲ್ಲಿ 'ಮಧುರವಾಣಿ' ಪತ್ರಿಕೆಯಲ್ಲಿ ಅವರ ಮೊದಲ ಕಥಾ ಸಂಕಲನ 'ಕೆಲವು ಸಣ್ಣಕಥೆಗಳು' 1920ರಲ್ಲಿ ಪ್ರಕಟವಾದವು. ಇವರು ತಮ್ಮ ಕಾರ್ಯದ ನಿರ್ಮಲತೆಯ ಮೂಲಕ ಮಹತ್ವದ ಕಥೆಗಾರರಾಗಿದ್ದಾರೆ"

ಅಡಿಗರು ಒಂದು ಕವನಕ್ಕೂ ಒಂದು ಸಣ್ಣಕಥೆಗೂ ಮೂಲತಃ ಯಾವ ವ್ಯತ್ಯಾಸವಿಲ್ಲ ಎಂದಿದ್ದಾರೆ. ಅದೇ ರೀತಿ ಯು.ಆರ್.ಅನಂತಮೂರ್ತಿಯವರು ಸಣ್ಣ ಕಥೆಗಳನ್ನು ಒಂದು ತಿಳಿಯೊ ಕಥೆ, ಇನ್ನೊಂದು ತಿಳಿಸೊ ಕಥೆ – ಮೊದಲನೆಯದು ನವ್ಯ ಕಥೆಯ ವಿಧಾನವಾದರೆ, ಎರಡನೆಯದು ಮಾಸ್ತಿ ಸಂಪ್ರದಾಯದ ಕಥೆ ಎಂದು ಹೇಳುತ್ತಾರೆ.

ಮೊಗಳ್ಳಿ ಗಣೇಶ್ ಅವರು ದಲಿತ ಸಮುದಾಯದಲ್ಲಿ ಕಥೆಗೆ ಇರುವ ಪ್ರಾಶಸ್ತ್ಯವನ್ನು ವಿವರಿಸುತ್ತ "ಕಥನ ಪರಂಪರೆಯನ್ನು ತನ್ನ ಸೊಲ್ಲಾಗಿ ಬೆಳೆಸಿಕೊಂಡು ಬಂದಿರುವ ದಲಿತ ಸಮುದಾಯಗಳು ಅದರ ಮೂಲಕವೇ ಮತ್ತೆ ತನ್ನನ್ನು ಕಟ್ಟಿಕೊಳ್ಳುತ್ತಾ ಹೋಗುತ್ತವೆ. ಈ ಗುಣದಿಂದಾಗಿಯೇ ದಲಿತ ಸಂವೇದನೆ ಬಹಳಷ್ಟು ಸಲ ಕಥನದ ನಿರಂತರ ನಿರೂಪಣೆಯ, ವಿಸ್ತರಣೆಯ, ಜಗಿತಗಳಿಂದ ಕೂಡಿರುತ್ತವೆ."[3] ಎಂದು ಹೇಳುತ್ತಾರೆ. ಇವರಲ್ಲದೆ ಇನ್ನೂ ಹಲವಾರು ಕನ್ನಡ ಕಥೆಗಾರರು ಸಣ್ಣಕಥೆಯ ಸ್ವರೂಪವನ್ನು ವಿಚಾರಗೈದಿದ್ದಾರೆ.

ಮಾಸ್ತಿಯವರ ಅಭಿಪ್ರಾಯದಲ್ಲಿ ಲಂಕೇಶ್, ತೇಜಸ್ವಿಯಂಥ, ಲೇಖಕರು ನವ್ಯಕಥೆಯಿಂದ ಕಥನದ ಮುಖ್ಯಧಾರಣೆಗೆ ಮರಳಿದವರು. ಅವರು ಮೊದಲಿನಿಂದಲೂ ಈ ಎರಡು ಧಾರೆಗಳನ್ನು ಒಟ್ಟಿಗೆ ಬಳಸಿಕೊಂಡವರು ಎಂದು ಅಭಿಪ್ರಾಯ ಪಡುತ್ತಾರೆ. ಇದಕ್ಕೆ ಸಂಬಂಧಿಸಿದಂತೆ – ಉಪಾಧ್ಯರವರು "ನಿಜವಾದ ಕಥನ ಕಲೆಯ ಮುಖ್ಯ ಲಕ್ಷಣವೆಂದರೆ ಬೇರೆಯವರಿಗೆ ತಿಳಿಸಿ ಹೇಳೋದು".

**ಮಂಜು ಕವಿದ ಸಂಜೆ ಮತ್ತು ಇತರೆ ಕತೆಗಳು**

ಮಂಜು ಕವಿದ ಸಂಜೆ ಮತ್ತು ಇತರೆ ಕತೆಗಳು' ಲೇಖಕ ಪಿ.ಲಂಕೇಶ್ ಅವರ ಕಥಾಸಂಕಲನ. ಇಲ್ಲಿ 'ಮಂಜು ಕವಿದ ಸಂಜೆ', 'ಡಿಸೋಜಾನ ಹೂವಿನ ವೃತ್ತಿ', 'ಎ ಸ್ಯೂಸೈಡ್ ನೋಟ್', 'ಒಂದು ಸಂಬಂಧದ ದಾಖಲೆ', 'ಶಾರದೆಯ ಪುಟ್ಟ ಸಾಹಸ', 'ಮನುಷ್ಯ ಎಂಬ ಮಾಯಾದರ್ಪಣ', 'ಅಂಚಿನ ಚಿತ್ರಗಳು', 'ಒಬ್ಬ ದಿಟ್ಟ ಮನುಷ್ಯ', 'ಗಡಿ', 'ಕ್ವೀಜುವಿನ ಹಠ', 'ದಯೆ ಮತ್ತು ದಾಕ್ಷಿಣ್ಯ', 'ಪ್ರೇಮ ಎಂಬ ವಿಸ್ಮಯ' ಹಾಗೂ 'ಮೃತ' ಸೇರಿದಂತೆ ಹನ್ನೆರೆಡು ಕಥೆಗಳು ಸಂಕಲನಗೊಂಡಿವೆ.

**ಮಂಜು ಕವಿದ ಸಂಜೆ**

ಪಿ.ಲಂಕೇಶರು ಮಹಿಳೆಯನ್ನು ಪ್ರೀತಿ, ಪ್ರೇಮ, ಕಾಮ, ಸಂಭೋಗ, ಗಂಡಸಿನ ಕಾಮವನ್ನು ಪೂರೈಸುವಂತಹವಳು ಎಂದೆಲ್ಲಾ ಪ್ರತಿನಿಧಿಸಿದ್ದಾರೆ. ಅಂತೆಯೆ ಈ ಕಥೆಯಲ್ಲೂ ಸಹ ಪುರುಷನ ಹತೋಟಿಯಿಲ್ಲದೆ ಹರಿಬಿಡುವ ಆಸೆಗೆ, ಲೈಂಗಿಕ ಆತುರಕ್ಕೆ ಸಿಗುವವಳು ಅವನ ಪ್ರಣಯದಾಟಕ್ಕೆ ಜೊತೆಯಾಗಿ ಕೈಜೋಡಿಸುವವಳು. ಪ್ರಭುದೇವನ ಅಕ್ಕನ ಮಗಳು 'ಮಂಜು' ಎಂಬ ಮಹಿಳೆ. ಅವಳು

ಯಾರನ್ನೊ ಹುಡುಕಿ ಹೋಗುತ್ತಿದ್ದಳು ಆಕಸ್ಮಿಕವಾಗಿ ಪ್ರಭುದೇವ ತಾನೇ ತಾನಾಗಿ ಬಲೆಗೆ ಸಿಕ್ಕಿರಬಹುದು, ಇಲ್ಲವೇ ಅವನ ಆತ್ಮಚರಿತೆ ಸಿಕ್ಕಿರುವ ಒಬ್ಬ ಮಹಿಳೆ ಅದನ್ನು ಪೂರ್ಣವಾಗಿ ಗ್ರಹಿಸಿ ಅವನ ವಿಳಾಸ ಹುಡುಕಿ ಬರುತ್ತಿದ್ದಾಗ ಇವನೇ ಸ್ವತಃ ಎದುರಾದನು. ಇದದಕ್ಕೆ ಸಾಕ್ಷಿಯಂತೆ "ಅವಳು ನಿಂತ ಕಾಲಮೇಲೆ ತಿರುಗಿದಳು. ಬೆಂಗಳೂರಿನಲ್ಲಿ ಇದ್ದಕ್ಕಿದ್ದಂತೆ ನಿಧಿ ಕಾಲಿಗೆ ತೊಡರಿಕೊಂಡಂತೆ ಖುಷಿಗೊಂಡಿದ್ದಳು. ಆದರೆ ಆ ಖುಷಿಯನ್ನು ತೋರಿಸಿಕೊಳ್ಳದೆ ಪ್ರಭುದೇವರ ಪಕ್ಕದಲ್ಲೇ ನಡೆದಳು"

ಹೆಣ್ಣು ಕೇವಲ ಸಂಸಾರದ ಕಣ್ಣಾಗಿ, ಗೆಳತಿಯಾಗಿ ಅಥವ ಪ್ರಿಯಕರೆಯಾಗಿ ಮಾತ್ರವಷ್ಟೆ ಪ್ರತಿನಿಧಿಸುವುದಿಲ್ಲ ಬದಲಿಗೆ ತನ್ನ ದೇಹ ಸೌಂದರ್ಯವನ್ನು ಬಂಡವಾಳವಾಗಿಸಿಕೊಂಡು ಪ್ರಭುದೇವನಂತಹ ಕಾಮಾಂಧಕನಿಗೆ ತಕ್ಕ ಪಾಠ ಕಲಿಸುವಂತಹ ಕೆಟ್ಟ ಹೆಂಗಸಾಗಿಯೂ ಪ್ರತಿನಿಧಿಸುತ್ತಾಳೆ ಎಂಬುದನ್ನು ಈ ಕಥೆಯಲ್ಲಿ ಲಂಕೇಶರು ಚಿತ್ರಿಸಿದ್ದಾರೆ. ಪ್ರಭುದೇವನು ಇವಳ ನಯವಾದ ಮಾತಿಗೆ ಮಾರುಹೋಗುತ್ತಾನೆ. ಅವಳು ಮನಸ್ಸು ಮಾಡಿದರೆ ಒಳ್ಳೆಯದನ್ನು ಮಾಡಬಲ್ಲಳು ಅಷ್ಟೇ ಸುಲಭವಾಗಿ ಕೆಟ್ಟದ್ದನ್ನು ಮಾಡಿ ನಾಶ ಮಾಡಬಲ್ಲಳು. ಹೆಣ್ಣಿನ ಸಾಮರ್ಥ್ಯ ಎಂತಹುದೆಂದು ಇಲ್ಲಿ ಲಂಕೇಶರು ಬರೆದಿರುವುದು ಸಾಕ್ಷಿಯಾಗಿದೆ.

ಮಂಜು ಪ್ರಭುದೇವನನ್ನು ಪ್ರೀತಿಯಿಂದ ಮಾತಾನಾಡಿಸಿ ಲೈಂಗಿಕ ಕ್ರಿಯೆಗೆ ಪ್ರೇರೇಪಿಸಿದಾಗ ಅವರಿಬ್ಬರು ಒಂದಾಗಿ ಬಿಟ್ಟರು. ಪ್ರಭುದೇವರಿಗೆ ಅವಳು ಯಾರೆಂಬುದರ ಅರಿವೇ ಇಲ್ಲದೆ ಮಧ್ಯರಾತ್ರಿಯವರೆಗೂ ಅವಳೊಡನೆ ಕಳೆದನು. ಅದರ ಪರಿಣಾಮ ಆಕೆ ಅವನ ಹಣ, ಚೆಕ್‌ಬುಕ್, ಪತ್ರಗಳು, ಪುಸ್ತಕಗಳನ್ನು ದೋಚಿ ಹೊರಟೇ ಬಿಟ್ಟಿದ್ದಳು.

ಇದೇ ಕಥೆಯ ಮತ್ತೊಂದು ಪಾತ್ರ ಗೌರಮ್ಮ. ಗೌರಮ್ಮ ಪ್ರಭುದೇವನ ಹೆಂಡತಿ ಒಂದು ರೀತಿಯ ಸಂಪ್ರದಾಯಸ್ಥ ಮುಗ್ಧೆ. ಲೈಂಗಿಕವಾಗಿ ಆಸಕ್ತಿಯಿರುವ ಪ್ರಭುದೇವನಿಗೆ ತೃಪ್ತಿಪಡಿಸುವಷ್ಟು ಲೈಂಗಿಕ ಆಸಕ್ತಿ ಇವಳಲ್ಲಿರಲಿಲ್ಲ. ಗೌರಮ್ಮ ತನ್ನ ವೈಜ್ಞಾನಿಕ ಸಾಧನೆಗೆ ಗಮನ ಹರಿಸುತ್ತಿದ್ದಳು. ಅದರಿಂದ ಹೆಚ್ಚು-ಹೆಚ್ಚು ಪ್ರಶಸ್ತಿಗಳನ್ನು ಸಂಪಾದಿಸುತ್ತಿದ್ದಳು. ಪ್ರಭುದೇವನಿಗೆ ಆಫೀಸಿನಲ್ಲಿ ವೇದಾವತಿ, ಜಯ ಎಂಬ ಹೆಣ್ಣುಗಳೊಂದಿನ ಸಂಬಂಧ ಗೌರಮ್ಮಳಿಗೆ ತಿಳಿದು ಅವಳ ಮನಸ್ಸಿನಲ್ಲಿ ಪ್ರಭುದೇವನ ಪತನ ಆರಂಭವಾಗುತ್ತದೆ. ಪ್ರಭುದೇವನ ಈ ಸ್ಥಿತಿಗೆ ಪರೋಕ್ಷವಾಗಿ ಗೌರಮ್ಮನೇ ಕಾರಣವಾಗುತ್ತಾಳೆ. ಅವನ ಆಸೆಗಳಿಗೆ ಸ್ವಲ್ಪವೂ ಸ್ಪಂದಿಸದ ಇವಳು ಅವನನ್ನು ದೂಷಿಸಲು ಮಾತ್ರ ನಿಲ್ಲುತ್ತಾಳೆ. ಅವನನ್ನು ಕೊಂಚ ಅರ್ಥಮಾಡಿಕೊಳ್ಳಲು ಪ್ರಯತ್ನಿಸಬಹುದಿತ್ತೇನೋ. ಮಂಜು ವಂಚನೆಮಾಡಿ, ಒಲಿಸಿಕೊಂಡ ಪ್ರಭುದೇವನನ್ನು ಹೆಂಡತಿಯಾಗಿ ಪ್ರೀತಿಯಿಂದಲೇ ಒಲಿಸಿಕೊಳ್ಳಬಹುದಿತ್ತು. ಕೇವಲ ತನ್ನ ವ್ಯವಹಾರವನ್ನು ನೋಡುತ್ತಿದ್ದರೆ ಪ್ರಭುದೇವನ ಕನಸು, ಆಸೆಗಳ ದುರ್ಮರಣಕ್ಕೆ ಗೌರಮ್ಮನೇ ಕತ್ತರಿಯಂತಾಗಿ ಪ್ರತಿನಿಧಿಸಿದ್ದಾಳೆ. ಅಂತಿಮವಾಗಿ ಮಂಜು ಪ್ರಭುವಿನ ಅಕ್ಕನ ಮಗಳಾಗಿದ್ದರೆ ಎಲ್ಲವನ್ನು ಕದ್ದು ಹೋಗುವ ಬದಲು ಪ್ರೀತಿಯಿಂದ ಕೇಳಿ ಪಡೆಯುತ್ತಿದ್ದಳು. ಅವಳು ನಯವಂಚಕಿ ಅದಕ್ಕೆ ಅವನಿಗೆ ಬೇಕಾದ್ದನ್ನು ಕೊಟ್ಟು ತನಗೆ ಬೇಕಾದ್ದನು ದೋಚಿ ಹೋದಳು.

**ಎ ಸೂಸೈಡ್ ನೋಟ್**

ಬದುಕಿನಲ್ಲಿ ಕಾಮವೆಂಬುದು ಉಳಿದೆಲ್ಲಾ ಪ್ರವೃತ್ತಿಗಳಿಗಿಂತ ತುಂಬಾ ಪ್ರಖರವಾದದ್ದು, ಅಲ್ಲಿ ಸಫಲಗೊಳ್ಳುವುದಾದರೆ ಅದೆ ಅಂತಿಮ ಸುಖ. ಮಿಕ್ಕೆಲ್ಲವುಗಳನ್ನು ಮರೆತು ಮೃಗಗಳಂತೆ, ಪಕ್ಷಿಗಳಂತೆ ದೇಹದ ನೆಲೆಯಲ್ಲೇ ಬದುಕುವುದಾದರೆ ಮನುಷ್ಯನೇ ಪರಮಸುಖಿ. ಶುದ್ಧ ಲೈಂಗಿಕತೆಗೆ ವಯಸ್ಸಿನ ಹಂಗಿಲ್ಲ ಎಂಬುವುದಷ್ಟೇ ಸತ್ಯ. ಈ ಕಥೆ ಮರೆಮಾಚಿದಂತೆ ಆಪ್ತ ಸಂಬಂಧವನ್ನು ಒಪ್ಪಿಕೊಳ್ಳುತ್ತದೆ._ಈ ಕಥೆಯ ಮುಖ್ಯ ಪಾತ್ರ ಮೀನ ಎಂಬ ಹೆಣ್ಣಿನದು. ಇವಳು ಅಧ್ಯಾಪಕ ವಿಶ್ವನಾಥ್ ಅವರ ಎರಡನೇ ಹೆಂಡತಿ. ಹೆಣ್ಣಿನ ಚಂಚಲತೆ, ಅವಳ ಪ್ರೀತಿ, ಆಕರ್ಷಣೆಗಳಿಗೆ ತನ್ನನ್ನು ಅರ್ಪಿಸಿಕೊಳ್ಳುವ ಬಗೆ, ಮದುವೆಗೂ

ಮುಂಚಿನ ಸಂಬಂಧ, ಮದುವೆಯ ನಂತರವೂ ಮುಂದುವರಿಕೆ ಹೇಗೆ ಹಲವಾರು ಆಯಾಮಗಳಲ್ಲಿ, ಪರಿಸ್ಥಿತಿಗಳಲ್ಲಿ ಹೆಣ್ಣನ್ನು ಪ್ರತಿನಿಧಿಸಲಾಗಿದೆ.

ಈ ಕಥೆಯಲ್ಲಿ ಒಂದು ಹೆಣ್ಣಿನ ಪ್ರೇಮಕಥೆಯ ದುರಂತ ಅಂತ್ಯವಾಗಿ ಚಿತ್ರಿಸಲಾಗಿದೆ. ಹೆಣ್ಣು ತಾನೆ ಗಂಡಿನ ಕಾಮಕ್ಕೆ ತುತ್ತಾಗುತ್ತಾಳೆ. ಕೆಲವೊಮ್ಮೆ ಅವಳೇ ಮೋಸದಿಂದ ವಂಚಿಸಿ ಬೇಕಾದ್ದನ್ನು ಪಡೆದೇ ತೀರುತ್ತಾಳೆ ಆದರೆ ಇಲ್ಲಿ ತಾನೇ ವಂಚನೆ ಮಾಡಿದೆ ಎಂಬ ಕಾರಣಕ್ಕೆ ಮನನೊಂದು, ಭಾವುಕಳಾಗಿ ಆತ್ಮಹತ್ಯೆ ಮಾಡಿಕೊಂಡ ಅಶಕ್ತ ಹೆಣ್ಣಿನ ಚಿತ್ರಣ ಇದಾಗಿದೆ. ವಯೋಸಹಜವಾದ ಪ್ರೀತಿ, ಲೈಂಗಿಕ ಆಸಕ್ತಿ, ಅನ್ಯಲಿಂಗದ ಆಕರ್ಷಣೆ ಇಲ್ಲಿ ಮೀನಾಳಿಗೂ ಸಹ ತೋರುತ್ತದೆ. ಅದನ್ನು ಹತೋಟಿಯಲ್ಲಿಡಲು ಪ್ರಯತ್ನಿಸಿದಳಾದರೂ ಪ್ರಯೋಜನವಾಗದೆ ತನ್ನ ಸ್ನೇಹಿತೆ ರೋಹಿಣಿಯ ಅಣ್ಣ 'ಜಗ್ಗು' ಎಂಬುವವನ ಆಕರ್ಷಣೆಗೆ ಒಳಗಾಗಿ ಬಿಡುತ್ತಾಳೆ. ಹೆಣ್ಣು ಚಂಚಲ ಸ್ವಭಾವದವಳು ಎಂಬುದು ಎಷ್ಟು ಸತ್ಯವೋ ಅಷ್ಟೇ ಸತ್ಯ ಅವಳು ಒಮ್ಮೆ ಮನಸ್ಸು ಕೊಟ್ಟ ಹುಡುಗನನ್ನು ಸಾಯುವವರೆಗೂ ಬಿಡುವುದಿಲ್ಲವೆಂಬುದು ಇದಕ್ಕೆ ಪ್ರತಿನಿಧಿಯಂತೆ ಮೀನಾ ಕಾಣುತ್ತಾಳೆ. ಜಗ್ಗುವಿಗೆ ತನ್ನ ಪ್ರೀತಿ, ಪ್ರೇಮವನ್ನು, ದೇಹವನ್ನು ಅರ್ಪಿಸಿಬಿಡುತ್ತಾಳೆ. ತಾಯಿಯ ಬಲವಂತಕ್ಕೊ ಅಥವಾ ತನ್ನ ಮುಂದಿನ ಜೀವನದ ಭದ್ರತೆಗೋ ವಿಶ್ವನಾಥರನ್ನು ವರಿಸುತ್ತಾಳೆ. ಅವನನ್ನೂ ಸಹ ಮನದಾಳದಿಂದ ಒಪ್ಪಿಕೊಳ್ಳುತ್ತಾಳೆ ಅದಕ್ಕೆ ಸಾಕ್ಷಿಯೆಂಬಂತೆ ಕಥೆಯಲ್ಲಿನ ಈ ಸಾಲುಗಳು

"ನಾನು ನನ್ನ ಪತಿಯನ್ನು ದ್ವೇಷಿಸುತ್ತಿರಲಿಲ್ಲ, ಬದಲಾಗಿ ಪ್ರೀತಿಸುತ್ತಿದ್ದೆ. ನನ್ನನ್ನು ಮಗುವಿನಂತೆ, ಗೆಳತಿಯಂತೆ, ವಿದ್ಯಾರ್ಥಿನಿಯಂತೆ ನೋಡಿಕೊಳ್ಳುತ್ತಿದ್ದ ವಿಶ್ವನಾಥ್ ನಿಜಕ್ಕೂ ನನ್ನ ಇಷ್ಟದ ವ್ಯಕ್ತಿ. ನಾವಿಬ್ಬರೂ ಆಟ ಆಡುತ್ತಿದ್ದೆವು, ಜೋಕ್ಸ್ ಹೇಳಿಕೊಂಡು ತಮಾಷೆ ಮಾಡುತ್ತಿದ್ದೆವು. ನಮ್ಮ ಅಗ್ಗದ ಸಿನಿಮಾ, ಕಾದಂಬರಿಗಳಲ್ಲಿ ಹೇಳುವಂತೆ, ಒಂದು ಪುಟ್ಟ ಮರಿ ಬೇಡವಾ ಎಂದು ಕೇಳಿ ನಗುತ್ತಿದ್ದೆವು. ಅವನು ತನ್ನ ಕಲ್ಪನೆಯ ಶತ್ರುಗಳನ್ನು ಎದುರಿಸಿ ಯುದ್ಧ ಮಾಡುವವನಂತೆ ನಟಿಸುತ್ತಿದ್ದ. ಪ್ರೇಮಿಯಾಗಿ ಕೂಡ ವಿಶ್ವನಾಥ್ ಅದ್ಭುತ ವ್ಯಕ್ತಿ. ಆತನಲ್ಲಿ ದೋಷವೇ ಇರಲಿಲ್ಲ. ಜಗತ್ತಿನ ಎಲ್ಲ ಮಹಾನ್ ವ್ಯಕ್ತಿಗಳು, ಅವರ ಚಿಂತನೆಗಳು, ಅವರ ಕ್ರಿಯೆಗಳು ನನಗೆ ಬಂದದ್ದೇ ವಿಶ್ವನಾಥ್‌ರಿಂದ. ಶೇಕ್ಸ್‌ಪಿಯರ್‌ನ ನಾಟಕಗಳ ಕಥೆ ಹೇಳಿ ರಂಜಿಸುತ್ತಿದ್ದ. ನನಗೆ ನಿದ್ದೆ ಬರುತ್ತಿಲ್ಲ ಅಂದರೆ ಡ್ಯೂಮಾ, ಹ್ಯೂಗೋ ಮುಂತಾದ ಕಾದಂಬರಿಗಳ ಕಥೆ ಹೇಳುತ್ತಿದ್ದ. ಶೇಕ್ಸ್‌ಪಿಯರನ ವಿಪರ್ಯಾಸವನ್ನು ವಿವರಿಸುತ್ತಿದ್ದ. ಆತ ಎಂದೂ ಕವಿಯಾಗುವ ಆಸೆ ಹೊಂದಿರಲಿಲ್ಲ. ಆತ ಬರೆದದ್ದೇ ಎಲ್ಲರನ್ನೂ ರಂಜಿಸುವ ಘಟನೆಗಳು ಹೇಳಿ. ಏಟ್ಸ್‌ನ ಈ ಪದ್ಯ ನೋಡು; ಈತ ತನ್ನ ಮಾಗಿದ ಮನಸ್ಸಿನಲ್ಲಿ ಅನಿಭವಿಸುವ ತಳಮಳವಿಚಿತ್ರ ಅಲ್ಲವೆ"

ಇದರಿಂದ ಒಮ್ಮೊಮ್ಮೆ ಅನಿಸುತ್ತದೆ. ಹೆಣ್ಣು ದೈಹಿಕ ಸುಖಕ್ಕಾಗಿ ಮಾತ್ರ ಗಂಡನ್ನು ಬಯಸುವುದಿಲ್ಲ. ಅವಳ ಭಾವನೆ ಚಿಂತನೆ, ನೋವು–ನಲಿವುಗಳನ್ನು ಹಂಚಿಕೊಳ್ಳಲು ಒಬ್ಬ ಜೊತೆಗಾರನ ಅವಶ್ಯಕತೆ ಅವಳಿಗಿರುತ್ತದೆ. ಇಲ್ಲಿ ಮೀನ ವಿಶ್ವನಾಥನ ಪತ್ನಿಯಾಗಿಯೂ ತನ್ನ ಪ್ರತಿನಿಧಿಪರಣವನ್ನು ಮರೆದಿರುವುದನ್ನು ಲಂಕೇಶರು ಮನೋಜ್ಞವಾಗಿ ಚಿತ್ರಿಸಿದ್ದಾರೆ.

ಮೀನಾ ಒಮ್ಮೆ "ನಾನೆಂದೂ ಜಗ್ಗುವಿಗೆ 'ಇಲ್ಲ' ಎಂದಿರಲಿಲ್ಲ" ಎನ್ನುವಂತಹ ಮಾತಿನಲ್ಲಿ ಓದುಗನಿಗೆ ಅರಿವಾಗುವುದು ಹೆಣ್ಣು ಬಯಸಿ ಲೈಂಗಿಕ ಕ್ರಿಯೆಗೆ, ಸಂಭೋಗಕ್ಕೆ ಆಸೆಪಟ್ಟರೆ ಗಂಡಸಿಗೆ ತೃಪ್ತಿಪಡಿಸುತ್ತಾಳೆ ಅವನ ಆಸೆಯನ್ನು ತಿರಸ್ಕರಿಸುವುದಿಲ್ಲ ಅದೇ ರೀತಿ ಮೀನಾ ಕೂಡ ತನ್ನನ್ನು ಅರ್ಪಿಸಿಬಿಟ್ಟಿದ್ದಳು. ಇಲ್ಲಿ ಹೆಣ್ಣಿನ ಮನದಾಳದ ಪ್ರೀತಿ, ಒಪ್ಪದವನಿಗೆ ಸಂತೃಪ್ತಿ ಪಡಿಸಬೇಕೆಂಬ ಅವಳ ಬಯಕೆ ಅರಿವಾಗುತ್ತದೆ. ಮದುವೆಯ ನಂತರ ಸಹ ಅವಳ ವಿಚಿತ್ರಪ್ರೇಮ, ಜಗ್ಗುವಿನ ಮೇಲಿನ ಕರುಣೆ, ಯಾವುದೂ ಕಡಿಮೆಯಾಗದೆ ಮುಂದುವರೆಯುತ್ತದೆ.

ವಿದ್ಯಾವಂತೆ, ಸಮಾಜದ ಅರಿವಿದ್ದವಳು, ತಾನು ಅಧ್ಯಾಪಕನ ಪತ್ನಿಯಾದರೂ ಕಾಮ, ಪ್ರೇಮ

ಅವಳನ್ನು ಆವರಿಸಿ ಬಂಧಿಸಿತ್ತು. ಅವಳು ಜಗ್ಗುವಿಗೆ 'ಬೇಡ' ಎಂದು ಹೇಳಲು ಸಾಧ್ಯವಾಗದೇ ತಾನೇ ಮನೆಗೆ ಬೀಗ ಹಾಕಿ ತನ್ನ ಗಂಡ ಹೋದೊಡನೆ ಅದನ್ನು ಜಗ್ಗುವಿಗೆ ಕೊಟ್ಟು ಕರೆಸಿಕೊಳ್ಳುತ್ತಿದ್ದಳು.

"ಇಷ್ಟಾದರೂ ಜಗ್ಗುವಿಗೆ ನಾನು 'ಬೇಡ'ಅನ್ನಲಾಗಲಿಲ್ಲ. ಅದು ನನ್ನಿಂದ ಸಾಧ್ಯವಿರಲಿಲ್ಲ. ಆದ್ದರಿಂದ ಪತಿ ವಿಶ್ವನಾಥ್ ಕಾಲೇಜಿಗೆ ಹೋದೊಡನೆ ನಾನೇ ಬೀಗ ಹಾಕಿದೆ. ಆದರೆ ಬೀಗದ ಕೈಯನ್ನು ಜಗ್ಗುವಿಗೆ ಕೊಟ್ಟು ಕರೆದುಕೊಳ್ಳುತ್ತಿದ್ದೆ".

ಇಲ್ಲಿ ಹೆಣ್ಣನ್ನು ಲಂಕೇಶರು ಅದ್ಭುತವಾಗಿ ಪ್ರತಿನಿಧಿಸಿದ್ದಾರೆ ಎಂಬುದು ನನ್ನ ಭಾವನೆ ತಾನು ಬಯಸಿದ ಪ್ರೀತಿಗೆ, ದೇಹಕ್ಕೆ, ದ್ರೋಹಮಾಡಬಾರದೆಂಬ ಅವಳ ದೃಢವಾದ ಪ್ರೀತಿಯಿಂದ ತನ್ನ ಪ್ರೀತಿಯನ್ನು ಉಳಿಸಿಕೊಳ್ಳಲು ಅವನನ್ನು ಕರೆಸಿಕೊಂಡಳು. ಹೆಣ್ಣು ಮನಸ್ಸು ಮಾಡಿದರೆ ಯಾರಿಗೂ ತಿಳಿಯದಂತೆ ತನ್ನ ಊಟವನ್ನು ಮಾಡುತ್ತಾಳೆ ಎಂಬುದಕ್ಕೆ ಇದು ಸಾಕ್ಷಿಯಾಯಿತು. ಮತ್ತೊಂದು ರೀತಿಯಲ್ಲಿ ಗಮನಿಸಿದಾಗ ಮೀನಾ ಮಾಡಿದ್ದು ವಂಚನೆಯಾ? ದ್ರೋಹವಾ? ಮೋಸವಾ? ಎಂಬ ಪ್ರಶ್ನೆ ಕಾಡುತ್ತದೆ. ಸಮಾಜದ ದೃಷ್ಟಿಯಲ್ಲಿ ಅವಳು ಮಾಡಿದ್ದು ತಪ್ಪು ಆದರೆ ತನ್ನ ಅಂತರಾಳಕ್ಕೆ ಅವಳು ಮಾಡಿದ್ದು ಸರಿ ಎಂಬಂತೆ ನಡೆದುಕೊಂಡವಳಾದರೂ ಅವಳ ಅಂತಿಮ ತೀರ್ಮಾನ ಸೂಸೈಡ್ ನೋಟ್ ಬರೆದಿಟ್ಟು ಸಾವನ್ನಪ್ಪಿದ್ದು. ಹೆಣ್ಣು ಪ್ರಾಮಾಣಿಕವಾಗಿ ಮಾಡುವ ಕೆಲಸ ಇದಾಗಿತ್ತು. ತನ್ನ ವಂಚನಾಕೃತ್ಯಕ್ಕೆ ಅಂತ್ಯ ಮಾಡಬೇಕು ಎಂಬ ಕಲ್ಪನೆ, ಚಿಂತನೆ ಅವಳಲ್ಲಿ ವ್ಯಾಪಕವಾಗಿ ಬೆಳೆದುಬಿಟ್ಟಿತ್ತು. ಪ್ರತಿಯೊಂದನ್ನು ಎದುರಿಸುವ ಸಾಮರ್ಥ್ಯವಿರುವ ಹೆಣ್ಣು ಕೆಲವೊಮ್ಮೆ ಸಂದಿಗ್ಧ ಪರಿಸ್ಥಿಯಲ್ಲಿ ತೀರ್ಮಾನ ತೆಗೆದುಕೊಳ್ಳಲು ಸಶಕ್ತಳಾಗದೆ ಅಸಹಾಯಕಳಾಗಿ ನಿಂತು ಬಿಡುತ್ತಾಳೆ.

ತನ್ನ ಜೀವನದ ಆಯ್ಕೆಯನ್ನು ಜಗ್ಗುವಿನೊಡನೆ ಮಾಡಬೇಕೆಂದು ಬಯಸಿದ್ದರೆ ವಿಶ್ವನಾಥನನ್ನು ಬಿಟ್ಟು ಹೋಗಿ ಜೀವನ ನಡೆಸಬಹುದಿತ್ತು. ಪ್ರಾಣ ಕಳೆದುಕೊಳ್ಳುವುದೇ ಪ್ರತೀ ಸಮಸ್ಯೆಗೆ ಪರಿಹಾರವಾಗಿರಲಾರದು ಎಂಬುದು ನನ್ನ ವೈಯಕ್ತಿಕ ಭಾವನೆ. ಸಮಾಜಕ್ಕೆ ಹಾಗೂ ತನ್ನ ಅಂತರಾತ್ಮಕ್ಕೆ ಹೆದರಿ ಇವನನ್ನೂ ಬಿಡಲಾಗದ ಮನಸ್ಸು ಗಂಡನಿಗೆ ದ್ರೋಹ ಮಾಡುತ್ತಿದ್ದೇನೆ ಎಂಬ ಅವಳ ತಳಮಳಕ್ಕೆ ಸಾವೇ ಉತ್ತರವಾಗಿ ನಿಲ್ಲಿತು.

**ಶಾರದೆಯ ಪುಟ್ಟ ಸಾಹಸ**

ಲಂಕೇಶರ ಈ ಕಥೆಯಲ್ಲಿ ಶಾರದೆ, ಶಾರದೆಯ ತಾಯಿ, ಶಾರದೆಯ ಸ್ನೇಹಿತೆ ಸರೋಜ ಮೂವರು ಹೆಣ್ಣು ಪಾತ್ರಗಳಿವೆ. ಶಾರದೆಯ ತಾಯಿಯು ಸಂಸಾರವನ್ನು ಬರುವ ಸಾವಿರ ವೇತನದಲ್ಲಿ ಸರಿದೂಗಿಸಿ ಕುಟುಂಬವನ್ನು ನಿಭಾಯಿಸುವಂತಹ ಸದೃಢ ದೇಹದ ಮಹಿಳೆಯಾಗಿ ಪ್ರತಿನಿಧಿಸಿದ್ದಾಳೆ. ಎಂತಹುದೇ ತಾಪತ್ರಯಗಳಿದ್ದರೂ ಗಂಡನ ಸಂಬಳ ಕಮ್ಮಿ, ಅದು ಜಿವನ ನಿರ್ವಹಣೆಗೆ ಸಾಕಾಗುವುದಿಲ್ಲವೆಂದು ಎಂದೂ ಗೊಣಗಿದವಳಲ್ಲ. ಕಥೆಯ ಪ್ರಮುಖ ಪಾತ್ರ ಶಾರದೆ. ಈಕೆ ವಿದ್ಯಾವಂತ ಹುಡುಗಿ. ತಂದೆ–ತಾಯಿಗೆ ಭಾರವಾಗಬಾರದೆಂದು ಬೆಂಗಳೂರಿನ ತನ್ನ ಅಜ್ಜಿಯ ಮನೆಯಲ್ಲಿ ಉಳಿದುಕೊಂಡು ಕೆಲಸಕ್ಕೆ ಹೋಗುತ್ತಿದ್ದಳು. ಅಜ್ಜಿಯನ್ನು ನೋಡಲು ಬಂದ ಸರೋಜ ಶಾರದೆಯ ರೂಪ ಕಂಡು ಇಬ್ಬರೂ ಸ್ನೇಹಿತೆಯರಾದರು. ಸರೋಜಳಿಗೆ ಶಾರದೆಯ ರೂಪವನ್ನು ಬಂಡವಾಳವಾಗಿಸಿಕೊಳ್ಳುವ ಚಿಂತನೆಯಿತ್ತು ಎಂದು ತಿಳಿಯುತ್ತದೆ. ಇಲ್ಲಿ ಹೆಣ್ಣು ಹೆಣ್ಣು ಸಮಯಸಾಧಕಿಯಾಗಿ ಪ್ರತಿನಿಧಿಸಿದ್ದಾಳೆ. ತನ್ನ ಜೀವನದ ನಿರ್ವಹಣೆ, ಸುಖಕ್ಕಾಗಿ ಬೇರೊಂದು ಹೆಣ್ಣನ್ನು ಹೀನ ಕೃತ್ಯಕ್ಕೆ ತಳ್ಳುವಂತಹುದು. ತನ್ನ ನಾಟಕೀಯ ಮಾತುಗಳಿಂದ ಶಾರದೆಯನ್ನು ಸೆಳೆದುಕೊಳ್ಳುವಲ್ಲಿ ಯಶಸ್ವಿಯಾಗಿ ಅವಳನ್ನು ಆಧುನಿಕತೆಯಾಗಿ ಮಾರ್ಪಡಿಸುತ್ತಾಳೆ ಮತ್ತು ಪಂಕಜ್‌ಮೂರ್ತಿ ಎಂಬ ವ್ಯಕ್ತಿಯನ್ನು ಪರಿಚಯಿಸುತ್ತಾಳೆ. ಹಾಗೂ ಆತನು ತುಂಬಾ ಒಳ್ಳೆಯವನು, ಪ್ರೀತಿಸುತ್ತಾನೆ ಎಂದು ಹೇಳಿ

ಮನವೊಲಿಸುತ್ತಾಳೆ. ಶಾರದೆ ಆತನ ಮಾತಿಗೆ ಮರುಳಾಗಿ ತನ್ನನ್ನು ಆತನಿಗೆ ಅರ್ಪಿಸಿಕೊಳ್ಳುತ್ತಾಳೆ. ಆದರೆ ಆತ 2000 ರೂಪಾಯಿಯನ್ನು ಪರ್ಸಿನಲ್ಲಿಟ್ಟು ಮಾಯವಾಗಿಬಿಟ್ಟ ಇವಳ ಪರಿಸ್ಥಿತಿಯು ಯಾರಿಗೂ ಹೇಳದ ಪರಿಸ್ಥಿತಿಯಲ್ಲಿತ್ತು. ಹಳ್ಳಿಯ ಹೆಣ್ಣಾದ ಶಾರದೆ ದುಡಿಮೆಗಾಗಿ ನಗರಕ್ಕೆ ಬಂದು ಈ ಅನಾಹುತಕ್ಕೆ ಸಿಲುಕಿ ಮರಳಿ ಹಳ್ಳಿಗೆ ಹೊರಟುಬಿಡುತ್ತಾಳೆ. ಇಲ್ಲಿ ಗಮನಿಸಬೇಕಾದುದು ಈಕೆ ದಿಟ್ಟ ಹೆಣ್ಣಾದರೂ ತಾನು ತೆಗೆದುಕೊಂಡ ದುಡುಕು ನಿರ್ಧಾರದಿಂದ ಜೀವನ ಹಾಳಾಗುತ್ತದೆ. ಇಲ್ಲಿ ಶಾರಗೆ ಅಮಾಯಕ ಹೆಣ್ಣಾಗಿ ಪ್ರತಿನಿಧಿಸಿದ್ದರೆ, ವಂಚನೆಯ ಗೆಳತಿಯಾಗಿ ಸರೋಜಳನ್ನು ಕಥೆಯಲ್ಲಿ ಪ್ರತಿನಿಧಿಸಿದ್ದಾರೆ. ಅವಳ ಯಾವುದೇ ದುಗುಡ ಭಯ ಆತಂಕವಿಲ್ಲದಂತಹ ಮಾತುಗಳಿಂದಲೇ ಅದು ಗ್ರಾಹ್ಯವಾಗುತ್ತದೆ.

**ಅಂಚಿನ ಚಿತ್ರಗಳು**

ಲಂಕೇಶರ ಈ ಕಥೆಯಲ್ಲಿ 'ಪಾರ್ವತಿ' ಎಂಬ ಹೆಣ್ಣನ್ನು ಸ್ನೇಹಿತೆಯಾಗಿ ಪ್ರತಿನಿಧಿಸುವಲ್ಲಿ ಉತ್ತಮ ರೀತಿಯಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ. ಪ್ರೀತಿಗೆ ಯಾವ ರೀತಿ ಹೆಣ್ಣು ಕರ್ಪೂರದಂತೆ ಕರಗುತ್ತಾಳೋ ಅಷ್ಟೇ ಬೇಗ ಅದೇ ಮಾರ್ಗದಲ್ಲಿ ಸ್ನೇಹಕ್ಕೂ, ಗೆಳೆತನಕ್ಕೂ ಸೋಲುತ್ತಾಳೆ. ತನ್ನ ನಿಸ್ವಾರ್ಥ ಗೆಳೆತನವನ್ನು ಒಬ್ಬರಿಗೆ ನೀಡುವುದರ ಮೂಲಕ ಗೆಳತಿಯಾಗಿ ಪ್ರತಿನಿಧಿಸುತ್ತಾಳೆ. ಪಾರ್ವತಿ ಭೂಪಾಲಂ ಎಂಬ 58 ವರ್ಷದ ವ್ಯಕ್ತಿಗೆ ಗೆಳತಿಯಾಗಿ ಕರ್ತವ್ಯ ಮೆರೆಯುತ್ತಾಳೆ. ಗೆಳೆತನಕ್ಕೆ ವಯಸ್ಸು, ಲಿಂಗ, ಜಾತಿಯ ಅಗತ್ಯವಿಲ್ಲ ಅದರ ಅರಿವಿರುವುದಿಲ್ಲ. ಭಾವನೆಗಳನ್ನು ಬೆರೆತ ಪ್ರೀತಿ ಎಷ್ಟು ಬಲಶಾಲಿಯಾಗಿರುತ್ತದೆಯೋ ನಿಷ್ಕಲ್ಮಷವಾದ ಸ್ನೇಹ/ಗೆಳೆತನವೂ ಜೀವನದಲ್ಲಿ ಕೊನೆವರೆಗೂ ಇರುತ್ತದೆ. ಪಾರ್ವತಿಯು ಭೂಪಲಂ ಎಂಬ ವರ್ತಕನನ್ನು, ಅವನ ಮೋಸಮಾಡದಿರುವ, ಒಬ್ಬರ ಋಣವನ್ನು ಇಟ್ಟುಕೊಳ್ಳಬಾರದೆಂಬ ಇಂಗಿತವನ್ನೆಲ್ಲಾ ಇಷ್ಟಪಟ್ಟು ಗೆಳೆತನ ಮಾಡಿ ಅವರೊಡನೆ ಸಿನಿಮಾಕ್ಕೂ ಹೋಗುತ್ತಿರುತ್ತಾಳೆ. ಇವಳಿಗೆ ಮದುವೆ ಆಗಿ ಜಯತೀರ್ಥನೆಂಬ ಗಂಡನಿರುತ್ತಾನೆ. ಗೆಳೆತನವೆಂದರೆ ಇದೇ ರೀತಿ ಯಾವುದಕ್ಕೂ ತಲೆಕೆಡಿಸಿಕೊಳ್ಳದ ಜಗತ್ತನ ಏಕೈಕ ಸಂಬಂಧ. ಭೂಪಾಲಂರನ್ನು ಚೆನ್ನಾಗಿ ಅರ್ಥಮಾಡಿಕೊಂಡಿರುತ್ತಾಳೆ. ಅವರ ಪ್ರಜ್ಞಾಪೂರ್ವಕವಾದ ಚಿಂತನೆಗಳನ್ನು, ಜ್ಞಾನವನ್ನು, ಅವರ ಸಾಹಿತ್ಯ ಆಸಕ್ತಿಯನ್ನು ಅರಿತವಳಾಗಿರುತ್ತಾಳೆ. ಗೆಳೆಯನ ಹುಟ್ಟುಹಬ್ಬ ಎಂದ ಕೂಡಲೇ ನೆನಪಾಗುವುದು ಅವರ ಮುಖ, ಅವರಲ್ಲಿದ್ದಂತಹ ಅನುಕಂಪದ ಗುಣ, ತಮಗಾಗಿ ಏನನ್ನು ಕೊಂಡುಕೊಳ್ಳದ ಭೂಪಾಲಂರಗೆ ಉಡುಗೊರೆಯಾಗಿ ಹಲವಾರು ವಸ್ತುಗಳನ್ನು ಪಾರ್ವತಿ ಖರೀದಿಸುತ್ತಾಳೆ. ಹೆಣ್ಣು ಪ್ರತಿಯೊಂದು ನೆಲೆಯಲ್ಲಿಯೂ, ಸಂಬಂಧದಲ್ಲಿಯೂ ಅವಳ ಅರಿವಿಕೆಯನ್ನು, ಜವಾಬ್ದಾರಿಯನ್ನು ಮರೆಯದೆ ನೆರವೇರಿಸುತ್ತಾಳೆ. ಗೆಳತಿಯಾಗಿ ಇಲ್ಲಿಯೂ ಪಾರ್ವತಿ ಭಯದಿಂದಲೇ ಎಲ್ಲವನ್ನೂ ಭೂಪಾಲಂ ಅವರಿಗೆ ಕೊಡಲು ಅಂಗಡಿಗೆ ಬರುತ್ತಾಳೆ. ಅವರಿಗೆ ಇದೆಲ್ಲಾ ಇಷ್ಟವಾಗುವುದಿಲ್ಲ ಎಂಬುದರ ಅರಿವು ಅವಳಿಗಿತ್ತು. ಇದು ನಿಜವಾದ ಗೆಳೆತನ. ಗೆಳೆಯ–ಗೆಳತಿಯೆರೆಂದರೆ ಸುತ್ತಾಡಿ ಸಮಯ ಕಳೆಯುವುದಲ್ಲ ಪಾರ್ವತಿ ಅವರನ್ನು ಅರ್ಥಮಾಡಿಕೊಂಡು ಅರಿತಿದ್ದಳು. ಭೂಪಾಲಂರ ಕೋಪವನ್ನು ಎದುರಿಸಲಾಗದೇ "ಇವತ್ತು ನನ್ನ ಹುಟ್ಟುಹಬ್ಬ ಕೂಡ" ಎಂಬ ಸುಳ್ಳನ್ನು ಹೇಳಿದ ನಿಸ್ಸಾಯಕತೆ, ಮುಗ್ಧ ಗೆಳತಿ ಪಾರ್ವತಿ. ಗೆಳೆಯನ ಹುಟ್ಟಿದ ದಿನವನ್ನು ಸಡಗರದಿಂದ ಆಚರಿಸಲು ಅಲಂಕೃತವಾಗಿ ಬಂದಿರುತ್ತಾಳೆ. ಅಳುತ್ತಾಳೆ, ಕಲ್ಲಿನ ಪ್ರತಿಮೆಯಂತೆ ನಿಂತುಬಿಡುತ್ತಾಳೆ, ಮನಸ್ಸು ಸ್ತಬ್ಧವಾಗಿಬಿಡುತ್ತದೆ. ಅಲ್ಲಿಂದ ಹೊರಟು ಬಿಡುತ್ತಾಳೆ.

ಪಾರ್ವತಿ ವಯಸ್ಸಿನ ಭೇದವಿಲ್ಲದೆ ಗೆಳೆತನ ಮಾಡಿ, ಅವರನ್ನು ಅವರ ಮನಸ್ಸಿನ ಭಾವನೆಗಳನ್ನು ಅರಿತು ನಡೆದುಕೊಂಡಳು, ಅವರು ಇದೆಲ್ಲವನ್ನು ಬಯಸುವುದಿಲ್ಲ, ಅವರಿಗೆ ಯಾರು ಬೇಕಾಗಿಲ್ಲ ಎಂಬುದರ ಜ್ಞಾನವಿದ್ದರೂ ತನ್ನ ಪ್ರೀತಿಯನ್ನು,

ಗೌರವವನ್ನು ಅವರಿಗೆ ಸೂಚಿಸುವುದರ ಮೂಲಕ ಗೆಳತಿಯಾಗಿ ಸಾರ್ಥಕ ಮೆರೆಯುತ್ತಾಳೆ. ಜಗತ್ತು ಏನೆನ್ನುತ್ತದೆ ಎಂಬುದರ ಅರಿವಿಲ್ಲದ ಗೆಳೆತನ ಪಾರ್ವತಿಯದು.

**ಒಬ್ಬ ದಿಟ್ಟ ಮನುಷ್ಯ**

ಈ ಕಥೆಯಲ್ಲಿ ರಂಗಣ್ಣನ ಮಗಳು ರೇವತಿಯನ್ನು ಗಂಡ ಮದುವೆಯಾದ ವರ್ಷವೇ ಬಿಟ್ಟು ಹೋಗಿಬಿಡುತ್ತಾನೆ. ವಿರಹ ವೇದನೆಯನ್ನು ಅನುಭವಿಸುತ್ತಾ ಅದನ್ನು ಪರಿಹರಿಸಿಕೊಳ್ಳಲು ಕೊಂಗರ ಮಣಿಯ ಸಹವಾಸವನ್ನು ಮಾಡುವ ಮಹಿಳೆಯಾಗಿ ಪ್ರತಿನಿಧಿಸಿದ್ದಾರೆ.

ದೈಹಿಕ ಸುಖದಿಂದ ವಂಚಿತಳಾದ ರೇವತಿ ಅನ್ಯಮಾರ್ಗವನ್ನು ಹಿಡಿದು ತೃಪ್ತಿ ಪಡೆಯುತ್ತಾಳೆ. ಸಮಾಜದ ವ್ಯವಸ್ಥೆಯು ಒಂದು ಹೆಣ್ಣಿಗೆ ಒಂದು ಗಂಡೆಂದು ಮದುವೆಯೆಂಬ ಬಂಧನದಲ್ಲಿ ಬೆಸೆಯುವ ವ್ಯವಸ್ಥೆ ಮಾಡಿದೆ. ಆದರೆ ರೇವತಿಯ ಬದುಕಿನಲ್ಲಿ ಆ ವ್ಯವಸ್ಥೆಯಾದಾಗ ಮಣಿಯೊಂದಿಗೆ ಸಂಬಂಧಕ್ಕೆ ಮುಂದಾಗುತ್ತಾಳೆ. ಲಂಕೇಶರು ರೇವತಿಯನ್ನು ಮನದ ತುಮುಲ, ಚಡಪಡಿಸುವಿಕೆ, ಲೈಂಗಿಕ ಅತೃಪ್ತಿಯನ್ನು ಎದುರಿಸುವ ಮಹಿಳೆಯಾಗಿ ಪ್ರತಿನಿಧಿಸಿದ್ದಾರೆ.

**ಕ್ವೀಜುವಿನ ಹಠ, ದಯೆ ಮತ್ತು ದಾಕ್ಷಿಣ್ಯ**

ಲಂಕೇಶರು ಕ್ವೀಜು ಎಂಬ ಮಹಿಳೆಯನ್ನು ಹಠಮಾರಿ, ಕ್ಷಮಾಧಾರಿತ್ರಿ, ಅಂತಿಮವಾಗಿ ಪಶ್ಚಾತ್ತಾಪ ಪಡುವ ಹೆಣ್ಣಾಗಿ ಪ್ರತಿನಿಧಿಸಿದ್ದಾರೆ. ತುಂಬು ಬಸುರಿಯಾದ ಕ್ವೀಜುವಿಗೆ ಊರಿನ ಗೌಡ ತನ್ನ ಗಂಡನ ಮರ್ಮಾಂಗಕ್ಕೆ ಒದ್ದಿದ್ದು ತಪ್ಪು ಕ್ಷಮೆ ಕೇಳಿಸಲೇಬೇಕು ಎಂಬ ಹಠವಾದಿ ತನದಿಂದ ಹಲವಾರು ಬಾರಿ ಅಧಿಕಾರಿಗಳ ಕಛೇರಿಯ ಮೆಟ್ಟಿಲೇರುತ್ತಾಳೆ. ಗೌಡರು ಸಾವಿರ ರೂಪಾಯಿಗಳನ್ನು ಎಸೆದು ಆರಿಸಿಕೊಳ್ಳಲು ಹೇಳಿದಾಗ ಬಡತನ, ಮಾನವೀಯತೆ, ಅಸಾಹಾಯಕತೆಯಿಂದ ಅದನ್ನು ಆಯ್ದುಕೊಳ್ಳದೆ ಬಂದುಬಿಡುತ್ತಾಳೆ. ಇಲ್ಲಿ ಅವಳ ಸ್ವಾಭಿಮಾನವನ್ನು ಪ್ರತಿನಿಧಿಸಿದ್ದಾರೆ. ಕ್ವೀಜು ಅವಿದ್ಯಾವಂತೆಯಾಗಿಯೂ ಅವಳನ್ನು ಪ್ರತಿನಿಧಿಸಲಾಗಿದೆ. ಅವಳಿಗೆ ಅರ್ಜಿ ಬರೆಯಲು ಬರುತ್ತಿರಲಿಲ್ಲ ಹಣವನ್ನು ಕೊಟ್ಟು ಬರೆಸುತ್ತಾಳೆ ಆದರೂ ಸೋಲುತ್ತಾಳೆ ಮತ್ತು ತೀರ್ಪು ರಾಜಿ ಮಾಡಿಕೊಳ್ಳುವಂತಾಗುತ್ತದೆ. ಒಪ್ಪದ ಕ್ವೀಜು ತನ್ನ ಮೊಂಡುತನ ಪ್ರದರ್ಶಿಸಿ ಅಲೆದಾಡುತ್ತಾಳೆ. ಒಂದು ಕಡೆ ಕ್ಷಮೆ ಕೇಳದ ಗೌಡ, ಮತ್ತೊಂದು ಕಡೆ ಹಠ ಬಿಡದೇ ವಿಚಾರಣೆಗಾಗಿ ಅಲೆಯುತ್ತಿರುವ ಕ್ವೀಜು ಹೆರಿಗೆ ನೋವು ಕಾಣಿಸಿಕೊಂಡಾಗ ಸಹಾಯಕ್ಕೆ ಗೌಡನೇ ಬರುತ್ತಾನೆ. ಅಸಹಾಯಕ ಹೆಣ್ಣು ಕ್ವೀಜುವಿಗೆ ತಪ್ಪಿನ ಅರಿವಾಗುತ್ತದೆ. ಗೌಡನನ್ನು ಕ್ಷಮಾಮಯಿಯಂತೆ ಕ್ಷಮಿಸಿ ಔತಣಕ್ಕೆ ಬರಹೇಳುತ್ತಾಳೆ. ಕ್ವೀಜುವಿನ ಅತಿರೇಕದ ಕೋಪ, ಹಠ ಗೌಡನಿಗೆ ಶಿಕ್ಷೆ ವಿಧಿಸುವಂತಾಗಿ ಬಿಟ್ಟಿರುತ್ತದೆ. ತಪ್ಪಿಗೆ ಪ್ರಾಯಶ್ಚಿತ್ತ ಪಡುತ್ತಾಳೆ ಕ್ವೀಜು. ಇಲ್ಲಿ ಹೆಣ್ಣನ್ನು ತಾಯಿಯಾಗಿ,ಕ್ಷಮಾಮಯಿಯಾಗಿ ಪ್ರತಿನಿಧಿಸಲಾಗಿದೆ.

**ಸಮಾರೋಪ**

ಲಂಕೇಶರು ತಮ್ಮ ಕಥೆಗಳಿಗೆ ವಸ್ತುಗಳ ಆಯ್ಕೆಯಲ್ಲಿ ವೈವಿಧ್ಯತೆಯನ್ನು ಮೆರೆದಿದ್ದಾರೆ. ಸಾಮಾಜಿಕ ಕಾಳಜಿಯನ್ನು ನಿರ್ಭೀತ ವ್ಯಕ್ತಿತ್ವವನ್ನು ಓದುಗನಿಗೆ ಬರುವಂತಹ ಬರವಣಿಗೆಯಾಗಿದೆ. ಕಥೆಗಳಲ್ಲಿ ಮಹಿಳೆಯರ ಮಾನಸಿಕ ಸ್ಥಿತಿ, ಅವರ ಜೀವನ ನಿರ್ವಹಣೆಗಾಗಿನ ತೊಳಲಾಟ, ಕುಟುಂಬ ಮತ್ತು ಸಮುದಾಯದೊಡನೆ ಅವಳ ಸಮತೋಲನದ ಮನಸ್ಥಿತಿ ಅರಿವಿಗೆ ಬರುತ್ತದೆ. ತನ್ನಲ್ಲದ ತಪ್ಪಿಗೆ ತಲೆಬಾಗುತ್ತಾಳೆ, ಕೆಲವೊಮ್ಮೆ ಸಿಡಿದು ಬೀಳುತ್ತಾಳೆ. ಪರಿಸ್ಥಿತಿಗೆ ಒಪ್ಪದಿದ್ದರೂ ಸುತ್ತಲಿನ ಸಮಾಜ ಒಪ್ಪುವಂತೆ ಪ್ರೇರೇಪಿಸಿ ಬಿಡುತ್ತದೆ. ಅಬಲೆ, ನಿಸ್ಸಾಹಯಕತೆ ಕಥೆಗಳ ಪಾತ್ರಗಳಲ್ಲಿ ಗಮನಿಸಬಹುದಾಗಿದೆ.

**ಆಕರ ಗ್ರಂಥ**


- ಲಂಕೇಶ್, ಪಿ. (2004). ಮಂಜು ಕವಿದ ಸಂಜೆ ಮತ್ತು ಇತರೆ ಕಥೆಗಳು. ಪತ್ರಿಕೆ ಪ್ರಕಾಶನ.

**ಪರಾಮರ್ಶನ ಗ್ರಂಥಗಳು**


- ಅಗ್ರಹಾರ ಕೃಷ್ಣಮೂರ್ತಿ. (2006). *ಸಂಸ್ಕೃತಿ ಕಥನ.* ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
- ಅನಂತಮೂರ್ತಿ, ಯು.ಆರ್. *ಪ್ರಜ್ಞೆ ಮತ್ತು ಪರಿಸರ.* ಕನ್ನಡ ಪುಸ್ತಕ ಪ್ರಾಧಿಕಾರ.
- ಅಶೋಕ, ಟಿ.ಪಿ. (2011). *ಸಾಹಿತ್ಯ ಸಂದರ್ಭ.* ವಸಂತ ಪ್ರಕಾಶನ.
- ಆಮೂರ, ಜಿ.ಎಸ್. *ಕನ್ನಡ ಕಥನ ಸಾಹಿತ್ಯ: ಸಣ್ಣ ಕಥೆ.* ಪ್ರಿಯದರ್ಶಿನಿ ಪ್ರಕಾಶನ
- ಆಶಾದೇವಿ, ಎಂ.ಎಸ್. *ಸ್ತ್ರೀ ಸಂಕಥನದ ಚಹರೆಗಳು.* ಅಹರ್ನಿಶಿ ಪ್ರಕಾಶನ.
- ಇಂದಿರಾ ಲಂಕೇಶ್. (2013). *ಹುಳಿಮಾವು ಮತ್ತು ನಾನು.* ಲಂಕೇಶ್ ಪ್ರಕಾಶನ,
- ಕರೀಗೌಡ ಬೀಚನಹಳ್ಳಿ. (2011). *ಶತಮಾನದ ಸಣ್ಣಕಥೆಗಳು ಸಮೀಕ್ಷೆ.* ಕರ್ನಾಟಕ ಸಾಹಿತ್ಯ ಆಕಾಡೆಮಿ.
- ಕವಿತಾ ರೈ. (2005). *ಮಹಿಳೆ; ಅಸ್ತಿತ್ವದ ಸಂಕಥನ.* ಪ್ರಗತಿ ಗ್ರಾಫಿಕ್ಸ್.